<u>ಎಲ್.ಎ.ಸಿ.ಸಂಖ್ಯೆ: **54/2017**</u>
<u>ಪಿ.ಡಬ್ಲೂ: **1**</u>

ದಿನಾಂಕ*: 21-06-2025* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ *2* ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಜೆ. ವಕೀಲರಿಂದ *:-*</u>

*6.* ಹಳಿಯೂರು ಗ್ರಾಮದ ಸರ್ವೆ ನಂಬರು *25* ರಲ್ಲಿ ನಿಮಗೆ ಸೇರಿದ ಎರಡು ಎಕರೆ ಖುಷ್ಕಿ ಜಮೀನನ್ನು ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್*-2* ಕ್ಕೆ ಸಂಬಂಧಿಸಿದಂತೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ *02-10-2012* ರಂದು ಹೊರಡಿಸಲಾಗಿದೆ ಎಂದರೆ ಸರಿ. ಅದಕ್ಕೆ ಪರಿಹಾರವಾಗಿ ಭೂಸ್ವಾಧೀನಾಧಿಕಾರಿಗಳು ನಿಮಗೆ ರೂ*.71,53,508/-* ಹಣವನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ಪರಿಹಾರ ಸಮಂಜಸವಾಗಿದೆ ಎಂದರೆ ಸರಿಯಲ್ಲ. ನಿಮ್ಮ ಜಮೀನು ಅದಕ್ಕಿಂತಲೂ ಹೆಚ್ಚು ಬೆಲೆಬಾಳುತ್ತಿತ್ತು ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

*7.* ದಿಃ *25-11-2015* ರಂದು ಸಾಕ್ಷಿಯು ಭೂಸ್ವಾಧೀನಾಧಿಕಾರಿಗಳಿಗೆ ಕಲಂ *65(1)* ರಡಿಯಲ್ಲಿ ಸಲ್ಲಿಸಿರುವ ತಕರಾರು ಅರ್ಜಿಯನ್ನು ಸಾಕ್ಷಿಗೆ ತೋರಿಸಿ ನೀವು ಭೂಸ್ವಾಧೀನಾಧಿಕಾರಿಗಳಿಗೆ ಸಲ್ಲಿಸಿರುವ ತಕರಾರು ಅರ್ಜಿ ಅದೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿ.ಆರ್*.1* ಎಂದು ಗುರುತಿಸಲಾಯಿತು. ನೀವು ಕಾಲಪರಿಮಿತಿಯೊಳಗೆ ಭೂಸ್ವಾಧೀನಾಧಿಕಾರಿಗಳಿಗೆ ಸದರಿ ತಕರಾರು ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಕಾಲ ಪರಿಮಿತಿಯೊಳಗೆ ತಕರಾರು ಸಲ್ಲಿಸದೇ ಇದ್ದರು ಸಹ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮಗೆ ನೀಡಿರುವ ಪರಿಹಾರ ವೈಜ್ಞಾನಿಕವಾಗಿದೆ ಎಂದರೆ ಸರಿಯಲ್ಲ. ಕಾಯ್ದೆಯಲ್ಲಿ ತಿಳಿಸಿರುವ ಅಂಶಗಳನ್ನು ಪರಿಗಣಿಸಿ ಅದಕ್ಕೆ ಅನುಗುಣವಾಗಿ ನಿಮಗೆ ಪರಿಹಾರವನ್ನು ನೀಡಲಾಗಿದೆ ಎಂದರೆ ಸರಿಯಲ್ಲ.

*8.* ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ತರೀಕೆರೆ ಪಟ್ಟಣಕ್ಕೆ ಹೊಂದಿಕೊಂಡಂತೆ ಇದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನಿನಲ್ಲಿ 777 ಅಡಿಕೆ ಗಿಡಗಳನ್ನು ಬೆಳೆಸಿದ್ದಾಗಿ, ಭೂಸ್ವಾಧೀನಗೊಂಡ ಸಮಯದಲ್ಲಿ ಅವುಗಳಿಗೆ 10 ವರ್ಷಗಳಾಗಿದ್ದಾಗಿ, ಒಂದು ಮರದಿಂದ ಪ್ರತಿವರ್ಷ 3 ಕೆ.ಜಿ. ಒಣ ಅಡಿಕೆ ಪಡೆಯುತ್ತಿದ್ದಾಗಿ ಒಟ್ಟು 580 ಮರಗಳಿಂದ 2310 ಕೆ.ಜಿ. ಒಣ ಅಡಿಕೆ ಪಡೆಯುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಅಡಿಕೆ ತೋಟದಿಂದ ನೀವು ರೂ.62,32,122.5 ಗಳನ್ನು ಪಡೆಯುತ್ತಿದ್ದಾಗಿ ಮತ್ತು ಪ್ರತಿ ಮರದಿಂದ ಅತೀ ಕನಿಷ್ಟ ಮೌಲ್ಯ ರೂ.11,339.25 ಗಳಾಗಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಹಾಗಾಗಿ ರೂ.11,339.25 ಗಳನ್ನು ಪ್ರತಿ ಮರಕ್ಕೆ ಪರಿಹಾರವಾಗಿ ಕೊಡಬೇಕಾಗುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಡಿಕೆ ಗಿಡಗಳ ಬಾಬ್ತು ನಿಮಗೆ ನೀಡಲಾಗಿರುವ ಪರಿಹಾರದ ಹಣ ಅವೈಜ್ಞಾನಿಕವಾಗಿದೆ ಎಂದು ಹೇಳಿರುವುದು ಸುಳ್ಳು ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ನಿಮ್ಮ ಜಮೀನಿನಲ್ಲಿದ್ದ ಗಿಡಗಳು, ಅದರ ಆಯಸ್ಸು ಮತ್ತು ಮೌಲ್ಯಮಾಪನವನ್ನು ನೀಡಿ ಅದಕ್ಕೆ ಸರಿಯಾದ ಪರಿಹಾರವನ್ನು ನಿಗದಿಪಡಿಸಿದ್ದಾರೆ ಎಂದರೆ ಸರಿಯಲ್ಲ.

9. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನಿನಲ್ಲಿ *70* ತೆಂಗಿನ ಗಿಡಗಳನ್ನು ಬೆಳೆಸಿದ್ದಾಗಿ, ಭೂಸ್ವಾಧೀನಗೊಂಡ ಸಮಯದಲ್ಲಿ ಅವುಗಳಿಗೆ 10 ವರ್ಷಗಳಾಗಿದ್ದಾಗಿ, ಒಂದು ಮರದಿಂದ ಪ್ರತಿವರ್ಷ 150 ತೆಂಗಿನ ಕಾಯಿಗಳನ್ನು ಪಡೆಯುತ್ತಿದ್ದಾಗಿ ಒಟ್ಟು 70 ಮರಗಳಿಂದ 10500 ತೆಂಗಿನ ಕಾಯಿಗಳನ್ನು ಪಡೆಯುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು

ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ತೆಂಗಿನ ಗಿಡಗಳು ಇದ್ದದ್ದು ನಿಜ ಎನ್ನುತ್ತಾರೆ. ತೆಂಗಿನ ಗಿಡಗಳ ಬಾಬ್ತು ಸಂಬಂಧಿಸಿದ ಅಧಿಕಾರಿಗಳು ನಿಮ್ಮ ಜಮೀನಿಗೆ ಭೇಟಿ ನೀಡಿ ಅವುಗಳನ್ನು ಪರಿಶೀಲಿಸಿ ವೈಜ್ಞಾನಿಕವಾಗಿ ಪರಿಹಾರವನ್ನು ನೀಡಲಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

10. ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿದ್ದ ಕೊಳವೆ ಬಾವಿಗೆ ರೂ.62,000/- ನ್ನು ಪರಿಹಾರವಾಗಿ ನೀಡಲಾಗಿದೆ ಎಂದರೆ ಸರಿ. ಸದರಿ ಬಾವಿಯನ್ನು ಕೊರೆಸಲು ರೂ.4,50,000/- ಖರ್ಚು ಮಾಡಿ ಏರ್ ಕಂಪ್ರೇಸರ್ ಕೊಳವೆ ಯಂತ್ರದಿಂದ ಕೊರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ದಾಖಲೆಗಳು ಇಲ್ಲ ಎನ್ನುತ್ತಾರೆ. ಕಲಂ 4(1) ಅಧಿಸೂಚನೆಯನ್ನು ಹೊರಡಿಸುವ ಕಾಲಕ್ಕೆ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪ್ರತಿ ಗುಂಟೆ ರೂ.4,00,000/- ಮೌಲ್ಯವಿತ್ತು ಎಂದು ಹೇಳಿದ್ದಿರಿ ಆ ಬಗ್ಗೆ ದಾಖಲೆಯನ್ನು ಹಜಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆಯನ್ನು ಹಾಜರು ಪಡಿಸಿಲ್ಲ ಆದರೆ ಅಷ್ಟು ಮೌಲ್ಯ ಇತ್ತು ಎನ್ನುತ್ತಾರೆ.

11. ತರೀಕೆರೆ ಬಸ್ ನಿಲ್ದಾಣದಿಂದ ಸ್ವಾಧೀನಪಡಿಸಿಕೊಂಡ ಜಮೀನಿಗೆ 4 ರಿಂದ 5 ಕಿ.ಮೀ. ದೂರವಾಗುತ್ತದೆ. ಸದರಿ ಜಮೀನಿನ ಅಜುಬಾಜು ತರೀಕೆರೆ ಪುರಸಭೆ ವ್ಯಾಪ್ತಿಯ ನಿವೇಶನಗಳು ಇದ್ದವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನನ್ನು ಭೂಪರಿವರ್ತನೆಗೊಳಿಸಿ ನಿವೇಶನಗಳನ್ನಾಗಿ ಮಾಡಿದ್ದರೆ ಪ್ರತಿ ಚದರಡಿಗೆ ರೂ.500/- ಮೌಲ್ಯ ಸಿಗುತ್ತಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ರಾಷ್ಟ್ರೀಯ ಹೆದ್ದಾರಿ 206 ರ ಉತ್ತರ ದಿಕ್ಕಿನಲ್ಲಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ರಸ್ತೆಯಿಂದ ಸ್ವಾಧೀನಪಡಿಸಿಕೊಂಡ ನಮ್ಮ ಜಮೀನು 4 ರಿಂದ 5 ಕಿ.ಮೀ. ದೂರದಲ್ಲಿದೆ.

12. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 13 ರಲ್ಲಿ

ತಿಳಿಸಿರುವ ಎಲ್ಲಾ ವಿಷಯಗಳು ಸುಳ್ಳು ಅದನ್ನು ನಿರೂಪಿಸಲು ನೀವು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹೇಳಿರುವುದು ಎಲ್ಲಾ ಸತ್ಯ ಆದರೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎನ್ನುತ್ತಾರೆ. ನೀರು ಕಾಲುವೆಯನ್ನು ತೋಡಿದ ಪರಿಣಾಮ ನಿಮ್ಮ ಜಮೀನಿನ ಅಂತರಜಲ ಮಟ್ಟ ಗಣನೀಯವಾಗಿ ಕುಸಿದಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ಸಂಬಂದಪಟ್ಟ ಇಲಾಖೆಯವರನ್ನು ಕರೆಸಿ ಪರಿಶೀಲಿಸಿ ವರದಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

13. ಸರ್ವೆ ನಂಬರು 25 ರಲ್ಲಿದ್ದ ನನ್ನ ಸಂಪೂರ್ಣ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಅದರಲ್ಲಿ ನನಗೆ ಉಳಿದ ಯಾವುದೇ ಜಮೀನು ಇಲ್ಲ. ಸ್ವಾಧೀನಪಡಿಸಿಕೊಂಡ ನಿಮ್ಮ ಜಮೀನು ತುಂಬಾ ಮೌಲ್ಯಯುತವಾಗಿದ್ದು ಅದನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ನಿಮಗೆ ತುಂಬಾ ನಷ್ಟ ಉಂಟಾಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-2 ಕ್ಕೆ ಸಂಬಂಧಿಸಿದಂತೆ ನನ್ನ ಬೇರೆ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ.

14. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ 17 ರಲ್ಲಿ ತಿಳಿಸಿರುವ ವಿಚಾರಗಳು  ಸುಳ್ಳು ಎಂದರೆ ಸರಿಯಲ್ಲ. ನಿಪಿ.10 ದಾಖಲೆ ಈ ಪ್ರಕರಣದ ಕಲಂ 4(1) ಅಧಿಸೂಚನೆಯದ ನಂತರದ್ದು ಮತ್ತು ಅದನ್ನು ಈ ಪ್ರಕರಣಕ್ಕೆ ಸೃಷ್ಟಿಸಿ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ  ನಿಪಿ.9 ದಾಖಲೆ ಸಹ ಈ ಪ್ರಕರಣದ ಕಲಂ 4(1) ಅಧಿಸೂಚನೆಯದ ನಂತರದ್ದು ಮತ್ತು ಸದರಿ ದಾಖಲೆಯ ಪ್ರಕಾರ 2021 ರ ನಂತರ ಜಾರಿಗೆ ಬರತಕ್ಕದ್ದು  ಎಂದರೆ ಸರಿ. ಕಾಯ್ದೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ವೈಜ್ಞಾನಿಕವಾಗಿ ನಿಮಗೆ ಪರಿಹಾರವನ್ನು ನೀಡಲಾಗಿದ್ದು ನೀವು ಹೆಚ್ಚಿನ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

**ಎಲ್.ಎ.ಸಿ.ಸಂಖ್ಯೆ 54/2017**
**ಪಿ.ಡಬ್ಲೂಃ 1**

ಪಾಟೀ ಸವಾಲುಃ *1* ನೇ ಎದುರುದಾರರ ಪರವಾಗಿ ಶ್ರೀ ಸಿ ಎಸ್ ಸರ್ಕಾರಿ ವಕೀಲರು *2* ನೇ ಎದುರುದಾರರ ಪರ ವಕೀಲರು ಮಾಡಿದ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ